**ಪಾಠ–7** **ಮೇ 8–14**

# ಸಿನಾಯಿ ಬೆಟ್ಟದಲ್ಲಿ ಒಡಂಬಡಿಕೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಧ.ಕಾಂಡ 1:29–31, ಹೋಶೇ 11:1, ಪ್ರಕ 5:9, ಧ.ಕಾಂಡ 29:10–13, ವಿ.ಕಾಂಡ 19:5,6; ರೋಮನ್ನ 6:1,2 ಮತ್ತು ಪ್ರಕ 14:12, ರೋಮನ್ನ 10:3.

**ಸ್ಮರಣವಾಕ್ಯ : "ನಾನು ಐಗುಪ್ತರಿಗೆ ಏನು ಮಾಡಿದೆನೋ, ಹದ್ದು ತನ್ನ ಮರಿಗಳನ್ನು ರೆಕ್ಕೆಗಳ ಮೇಲೆ ಹೊತ್ತುಕೊಳ್ಳುದಂತೆ ನಾನು ನಿಮ್ಮನ್ನು ಹೊತ್ತುಕೊಳ್ಳುವಂತೆ ನಾನು ನಿಮ್ಮನ್ನು ಹೊತ್ತುಕೊಂಡು ನನ್ನ ಸ್ಥಳಕ್ಕೆ ಹೇಗೆ ಸೇರಿಸಿದೆನೋ ಇದನ್ನೆಲ್ಲಾ ನೀವು ನೋಡಿದ್ದೀರಷ್ಟೆ"** (ವಿಮೋ.ಕಾಂಡ್ 19:4).

ಒಬ್ಬ ಪುಟ್ಟ ಬಾಲಕನು, ಏಳು ಮಕ್ಕಳಲ್ಲಿ ಒಬ್ಬನು ಒಂದು ಅಪಘಾತದಲ್ಲಿ ಗಾಯಹೊಂದಿ ಆಸ್ಪತ್ರೆಗೆ ಸೇರಿಸಲ್ಪಟ್ಟನು. ಆತನ ಮನೆಯಲ್ಲಿ ಎಲ್ಲದಕ್ಕೂ ಬಹಳ ಕೊರತೆಯಿತ್ತು. ಅವನು ಎಂದಿಗೂ ಲೋಟದ ತುಂಬಾ ಹಾಲನ್ನು ಕುಡಿಯಲು ಆಗುತ್ತಿರಲಿಲ್ಲ. ತುಂಬಿದ ಒಂದು ಲೋಟ ಹಾಲನ್ನು ಎರಡು ಮಕ್ಕಳು ಕುಡಿಯಬೇಕು. ಮೊದಲು ಕುಡಿಯುವವರಿಗೆ ಅರ್ಧಕ್ಕಿಂತ ಹೆಚ್ಚು ಕುಡಿಯದ ಹಾಗೆ ಎಚ್ಚರಿಕೆಯಿಂದ ಕುಡಿಯಬೇಕಿತ್ತು. ಆಸ್ಪತ್ರೆಯಲ್ಲಿ ಆ ಪುಟ್ಟ ಹುಡುಗನಿಗೆ ಚಿಕಿತ್ಸೆ ಕೊಟ್ಟು ಸರಿಪಡಿಸಿದ ನಂತರ ದಾದಿಯು ಅವನಿಗೆ ಒಂದು ದೊಡ್ಡ

* ಮೇ 15ನೇ ಸಬ್ಬತ್ತಿಗೆ ಈ ಪಾಠವನ್ನು ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ಲೋಟದಲ್ಲಿ ಹಾಲನ್ನು ತಂದುಕೊಟ್ಟಳು. ಆ ಹುಡುಗನು ಹಾಲಿನ ಲೋಟವನ್ನು ಆಸೆಗಣ್ಣಿನಿಂದ ನೋಡುತ್ತಾ ಮನೆಯಲ್ಲಿ ಮಾಡುತ್ತಿದ್ದುದನ್ನು ಜ್ಞಾಪಿಸಿಕೊಂಡು ದಾದಿಯನ್ನು "ನಾನು ಇದರಲ್ಲಿ ಎಷ್ಟು ಕುಡಿಯಬೇಕು?" ಎಂದು ಕೇಳಿದನು. ಬಾಲಕನ ಮಾತನ್ನು ಕೇಳಿ ದಾದಿಯು ಗದ್ಗತಿಳಾಗಿ 'ಪೂರ್ತಿ ಕುಡಿ, ಮಗುವೆ, ಪೂರ್ತಿ ಕುಡಿ!' ಎಂದು ಹೇಳಿದಳು– ಹೆಚ್.ಎಂ.ಎಸ್. ರಿಚರ್ಡ್ಸ್ ಫ್ರೀ ಗ್ರೇಸ್ ಪುಟ 4.

ಈ ಹುಡುಗನಿಗೆ ಸಿಕ್ಕ ಸವಲತ್ತಿನಂತೆಯೇ ಇಸ್ರಾಯೇಲ್ಯರಿಗಿಗೆ ಸವಲತ್ತನ್ನು ನಮ್ಮದೇ ಎಂಬಂತೆ ರಕ್ಷಣೆಯೆಂಬ ಬಾವಿಯಿಂದ ಉಕ್ಕುವ ಜೀವಜಲವನ್ನು ಇಂದು ನಾವು ಕುಡಿಯುವಂತಾಗಿದೆ. ಅವರಿಗಾದ ಬಿಡುಗಡೆಯು ದೇವರ ಅತಿಶಯವಾದ ಕೃಪೆಯನ್ನು ತೋರಿಸಿಕೊಡುತ್ತದೆ. ಅದರಂತೆಯೇ, ನಾವು ನಮ್ಮ ಪಾಪವೆಂಬ ದಾಸತ್ವದಿಂದ ಬಿಡುಗಡೆ ಹೊಂದಲು ಆತನ ಕೃಪೆಯೇ ಕಾರಣವಾಗಿದೆ.

**ಈ ವಾರದ ಪಕ್ಷಿನೋಟ :** ದೇವರು ತನಗೂ ಇಸ್ರಾಯೇಲ್ಯರಿಗೂ ಇದ್ದ ಸಂಬಂಧವನ್ನು ಯಾವುದಕ್ಕೆ ಹೋಲಿಕೆ ಮಾಡಿದ್ದಾನೆ? ಯಾವ ರೀತಿಯಲ್ಲಿ ವಿಮೋಚನೆಕಾಂಡದ ಮತ್ತು ಸಿನಾಯಿಬೆಟ್ಟದ ಕಥೆಗಳು ನಮ್ಮ ವೈಯಕ್ತಿಕ ರಕ್ಷಣೆಗೆ ಸಾಮ್ಯವಾಗಿವೆ? ಸಿನಾಯಿ ಬೆಟ್ಟದಲ್ಲಿ ಏರ್ಪಟ್ಟ ಒಡಂಬಡಿಕೆಯ ಪಾತ್ರವೇನು?

**ಭಾನುವಾರ** **ಮೇ 9**

## ಹದ್ದಿನ ರೆಕ್ಕೆಗಳ ಮೇಲೆ

ಒಂದು ಜನಾಂಗವಾಗಿ ಇಸ್ರಾಯೇಲ್ಯರು ಐಗುಪ್ತದ ಮಿಥ್ಯ ಧರ್ಮಾಚರಣೆಯಲ್ಲಿ ಬಹಳ ದೀರ್ಘಕಾಲ ಮುಳುಗಿಹೋಗಿದ್ದ ಕಾರಣದಿಂದ ಅವರು ದೇವರಜ್ಞಾನ ಆತನ ಚಿತ್ತ ಮತ್ತು ಒಳ್ಳೆಯತನದ ವಿಷಯದಲ್ಲಿ ಮಬ್ಬಾಗಿದ್ದರು.

ದೇವರು ಅವರನ್ನು ತಿರುಗಿ ತನ್ನ ಕಡೆಗೆ ಗೆದ್ದುಕೊಳ್ಳುವುದು ಹೇಗೆ?

ಆತನು ತನ್ನ ನಿರ್ವ್ಯಾಜ್ಯ ಪ್ರೀತಿಯನ್ನು ಇಸ್ರಾಯೇಲ್ಯರಿಗೆ ತೋರಿಸುವವನಾಗಿ ಬಿಡುಗಡೆ ಉಂಟುಮಾಡುವ ಮಹತ್ಕಾರ್ಯಗಳ ಮೂಲಕ ಮಾಡುವವನಾಗಿದ್ದನು. ಆತನು ತಾನು ಏರ್ಪಟಿಸಿದ ಒಡಂಬಡಿಕೆಗೆ ಇಸ್ರಾಯೇಲ್ ಜನಾಂಗವು

ಪ್ರೀತಿಯಿಂದ ಪ್ರತಿಕ್ರಿಯೆಯನ್ನು ತೋರಿಸುವಂತೆ ಅವರನ್ನು ಒಲಿಸಿಕೊಳ್ಳಲು ಪ್ರಾರಂಭಿಸಿದನು. ಸಿನಾಯಿ ಬೆಟ್ಟದಲ್ಲಿ ದೇವರು ಮೊದಲಿಗೆ ತನ್ನ ಕೃಪಾಭರಿತ ಕೃತ್ಯಗಳನ್ನು ಇಸ್ರಾಯೇಲ್ ಜನಾಂಗಕ್ಕೆ ಅರುಹಿದನು.

ದೇವರು ಇಸ್ರಾಯೇಲ್ಯರನ್ನು ಐಗುಪ್ತದಿಂದ ಕಾನಾನ್‌ದೇಶಕ್ಕೆ ಯಾವ ರೀತಿಯಲ್ಲಿ ಕರೆದುಕೊಂಡು ಬಂದನು ಎಂಬುದನ್ನು ಯಾವ ಎರಡು ನಿದರ್ಶನಗಳು ವಿವರಿಸುತ್ತವೆ?

ವಿ.ಕಾಂಡ 19:4, ಧ.ಕಾಂಡ 32:10–12.

ಧ.ಕಾಂಡ 1:29–31, ಹೋಶೇಯ 11:1.

ದೇವರು ತನ್ನ ಜನರ ವಿಷಯದಲ್ಲಿ ತಾನು ತೋರುವ ಸ್ವಭಾವದ ಬಗ್ಗೆ ಈ ನಿದರ್ಶನಗಳ ನಿಮಗೆ ಏನನ್ನು ಬೋಧಿಸುತ್ತವೆ?

ದೇವರು ನಮ್ಮ ಅಸಹಾಯಕತೆಯನ್ನು ಅರಿತಿರುವನಾಗಿದ್ದೇನೆಂದು ಈ ನಿದರ್ಶನಗಳು ನಮಗೆ ತಿಳಿಸಿಕೊಡುತ್ತವೆ. ಕೀರ್ತನೆ 103:13,14ನೇ ವಚನಗಳನ್ನು ಓದಿರಿ. ಹದ್ದು ತನ್ನ ಮರಿಯನ್ನು ಮತ್ತು ಹೆತ್ತವರು (ತಂದೆ) ಮಗುವನ್ನು ಎತ್ತಿಕೊಂಡು ಹೋಗುವ ಎರಡು ಚಿತ್ರಗಳೂ ನಮಗೆ ದೇವರು ನಮ್ಮ ಸುಕ್ಷೇಮದ ಬಗ್ಗೆ ಕಾಳಜಿಯುಳ್ಳವನಾಗಿದ್ದಾನೆಂಬ ಅರಿವನ್ನು ಕೊಡುತ್ತವೆ. ಆತನು ನಮ್ಮಲ್ಲಿ ಪೂರ್ಣವಾದ ಪಕ್ವತೆ ತರುವವನಾಗಿದ್ದು ಕೋಮಲನೂ ಆಧಾರನೂ ಸಂರಕ್ಷನೂ ಪ್ರೋತ್ಸಾಹ ನೀಡುವವನೂ ಆಗಿದ್ದು ನಮ್ಮಲ್ಲಿ ಪೂರ್ಣಪಕ್ವತೆ ತರಲು ಬಯಸುವವನಾಗಿದ್ದಾನೆ.

ಹದ್ದು ತನ್ನ ಮರಿಗಳ ವಿಷಯದಲ್ಲಿ ವಿಶೇಷವಾದ ಕಾಳಜಿಯನ್ನು ವಹಿಸುವ ಗುಣಕ್ಕೆ ಹೆಸರಾಗಿದೆ. ತನ್ನ ಮರಿಗೆ ಹಾರುವುದನ್ನು ಕಲಿಸುವಾಗ ಹದ್ದು ಅವನ್ನು ತನ್ನ ರೆಕ್ಕೆಯಲ್ಲಿ ಸಿನಾಯಿ ಬೆಟ್ಟಕ್ಕಿಂತಲೂ ಎತ್ತರ ಎತ್ತಿಕೊಂಡು ಹೋಗಿ ಮೇಲಿನಿಂದ ಅದನ್ನು ಬಿಡುತ್ತದೆ. ಒಂದು ವೇಳೆ ಮರಿಯು ಹಾರಲಾರದೆ ಕೆಳಕ್ಕೆ ಬೀಳುತ್ತಿದ್ದರೆ ಕೂಡಲೇ ಅದರ ತಂದೆಯು ಮರಿಯ ಕೆಳಭಾಗಕ್ಕೆ ನುಗ್ಗಿ ಅದನ್ನು ತನ್ನ ರೆಕ್ಕೆಯ ಮೇಲೆ ಕುಳ್ಳಿರಿಸಿಕೊಂಡು ಮತ್ತೆ ಮೇಲಕ್ಕೆ ಹಾರುತ್ತಾ ಬಂಡೆ ಸಂದುಗಳಲ್ಲಿ

ಕಟ್ಟಿದ ಗೂಡಿಗೆ ಕೊಂಡೊಯ್ಯುತ್ತದೆ. ದೇವರು ಇಸ್ರಾಯೇಲ್ಯರನ್ನು ಇದೇ ರೀತಿ ಐಗುಪ್ತ ದೇಶದಿಂದ ಹೊತ್ತುಕೊಂಡು ಬಂದೆನು ಎಂದು ನುಡಿಯುತ್ತಾನೆ"– ಜಾರ್ಜ್ ನೈಟ್, ತಿಯಾಲಜಿ ಆಫ್ ನರೇಷನ್ ಪುಟ 128.

ದೇವರು ನಮಗೆ ತೋರುವ ಆಸಕ್ತಿಯನ್ನು ನಾವು ಒಬ್ಬರ ಮೇಲೊಬ್ಬರು ತೋರುವ ಆಸಕ್ತಿಗೆ ಹೋಲಿಸಿಕೊಂಡಾಗ ಇತರರ ವಿಷಯದಲ್ಲಿ ನಾವು ತೋರುವ ಕಾಳಜಿಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ?

ನಿಮ್ಮ ಅನುಭವದ ಆಧಾರದ ಮೇಲೆ ದೇವರ ನಿಸ್ವಾರ್ಥಪೂರ್ಣವಾದ ಕಾಳಜಿಯನ್ನು ವಿವರಿಸಲು ಯಾವ ನಿದರ್ಶನವನ್ನು ಉಪಯೋಗಿಸುವಿರಿ? ನೀವು ಯಾವುದೇ ಸಂಸ್ಕೃತಿಯಲ್ಲಿ ಜೀವಿಸುತ್ತಿದ್ದರೂ ಸರಿ ಅದರಿಂದ ನಿಮ್ಮ ಸ್ವಂತ ಅನುಭವಕ್ಕೆ ಸಿಗುವ ಕೆಲವು ಹೋಲಿಕೆಗಳನ್ನು ನಿಮ್ಮ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳಿರಿ ಮತ್ತು ತರಗತಿಯೊಂದಿಗೆ ಹಂಚಿಕೊಳ್ಳಿರಿ.

**ಸೋಮವಾರ** **ಮೇ 10**

## "ರಕ್ಷಣೆಯ ಮಾದರಿ"

ನಾನು ಮಾಡಿದ ವಾಗ್ದಾನವನ್ನು ನೆನಸಿಕೊಂಡೆನು. ಆದುದರಿಂದ ನೀನು ಇಸ್ರಾಯೇಲ್ಯರಿಗೆ ನನ್ನ ಹೆಸರಿನಲ್ಲಿ ಹೇಳಬೇಕಾದದ್ದೇನೆಂದರೆ– ನಾನು ಯಹೋವನು; ಐಗುಪ್ತರು ನಿಮ್ಮಿಂದ ಮಾಡಿಸುವ ಬಿಟ್ಟೀ ಕೆಲಸಗಳನ್ನು ನಾನು ತಪ್ಪಿಸಿ ಅವರಲ್ಲಿ ನಿಮಗಿರುವ ದಾಸತ್ವವನ್ನು ತೊಲಗಿಸಿ ನನ್ನ ಕೈಚಾಚಿ ಅವರಿಗೆ ಮಹಾಶಿಕ್ಷೆಗಳನ್ನು ವಿಧಿಸಿ ನಿಮ್ಮನ್ನು ರಕ್ಷಿಸುವೆನು. ನಾನು ನಿಮ್ಮನ್ನು ಪ್ರಜೆಯೆಂದು ಆರಿಸಿಕೊಂಡು ನಿಮಗೆ ದೇವರಾಗಿರುವೆನು.... ಯೆಹೋವನು ಎಂಬ ನಾನೇ ನಿಮಗೆ ದೇವರಾಗಿದ್ದೇನೆಂದು ತಿಳಿದುಬರುವುದು (ವಿಮೋಚನಕಾಂಡ 6:6,7).

ಮೇಲಿನ ವಚನಗಳನ್ನು ಗಮನಿಸಿರಿ: ಒಡಂಬಡಿಕೆಯ ಸಂಬಂಧದ ಅನುಸಾರ ದೇವರು ಮನುಷ್ಯನ ವಿಷಯದಲ್ಲಿ ವಹಿಸುವ ಪಾತ್ರದಲ್ಲಿ ಯಾವ ನಿಯಮವನ್ನು ನೋಡಬಹುದು? ('ನಾನು' ಎಂಬ ಪದವು ಎಷ್ಟು ಸಲ ಕಾಣಿಸಿಕೊಂಡಿದೆ ಎಂಬುದರ ಮೇಲೆ ದೃಷ್ಟಿ ಹರಿಸಿರಿ). ಐಗುಪ್ತದ ದಾಸತ್ವದಿಂದ ಆದ ಇಸ್ರಾಯೇಲ್ಯರ ಬಿಡುಗಡೆ ಮತ್ತು ಜಲಪ್ರಳಯದಿಂದ ನೋಹ ಮತ್ತು ಆತನ ಕುಟುಂಬಕ್ಕೆ

ಸಿಕ್ಕಿದ ರಕ್ಷಣೆ ಇವೆರಡೂ ಮೋಶೆಯು ಬರೆದ ಪ್ರಮುಖ ರಕ್ಷಣಾ ಘಟನೆಗಳಾಗಿವೆ. ಇವೆರಡೂ ಘಟನೆಗಳು ರಕ್ಷಣೆಯ ವೈಜ್ಞಾನಿಕ ಒಳನೋಟವನ್ನು ಒದಗಿಸುತ್ತವೆ. ಆದರೆ ಇಸ್ರಾಯೇಲ್ಯರ ವಿಮೋಚನಾ ಕಾರ್ಯವು ನಿರ್ದಿಷ್ಟವಾಗಿ ಮೂಲ ಮಾದರಿಯನ್ನು ಒದಗಿಸುತ್ತದೆ.

ದೇವರು ಮೋಶೆಯ ಮೂಲಕ "ನಾನು ನನ್ನ ಕೈಚಾಚಿ.... ನಿಮ್ಮನ್ನು ರಕ್ಷಿಸುವೆನು" (ವಿ.ಕಾಂಡ 6:6 ಒತ್ತಿ ಹೇಳುತ್ತದೆ). ದೇವರು ಇಲ್ಲಿ ದೇವರು ತಾನು "ವಿಮೋಚಿಸುವ ಸಮೀಪ ಬಂಧು"ವಿನಂತೆ ಕಾರ್ಯನಿರ್ವಹಿಸುವುದಾಗಿ ಹೇಳುತ್ತಾನೆ.

ಒಬ್ಬ ವ್ಯಕ್ತಿಯು ತಾನು ಸಾಲಗಾರನಾಗಿ ತೀರಿಸಲಾಗದೆ ದಾಸತ್ವದಲ್ಲಿದ್ದರೆ ಅಥವಾ ದಾಸತ್ವಕ್ಕೆ ಒಳಗಾಗುತ್ತಿದ್ದರೆ ಅಂಥವನಿಗೆ ಅವನ ಕುಟುಂಬದ ಮತ್ತೊಬ್ಬನು ಅವನನ್ನು ಬಿಡಿಸಿಕೊಳ್ಳಲು ಈಡುಕೊಡಬೇಕಾಗಿತ್ತು ಅಥವಾ ಅವನನ್ನು ಹಿಂದಕ್ಕೆ ಕೊಂಡಕೊಳ್ಳಬೇಕಾಗಿತ್ತು. ಇದನ್ನು ವಿ.ಕಾಂಡ 6:6ನೇ ವಚನವು 'ವಿಮೋಚಿಸು' ಎಂಬುದಾಗಿ ಕರೆಯುತ್ತದೆ. ಇಸ್ರಾಯೇಲ್‌ಗೆ ಈ ಲೋಕದಲ್ಲಿ ಅವರನ್ನು ಯಾರೇ ಸಮೀಪ ಬಂಧುವಿರಲಿಲ್ಲ. ಆದರೆ ದೇವರೇ ಅವರ ಸಂಬಂಧಿ, ವಿಮೋಚಕನಾದ ಸಮೀಪ ಬಂಧುವಾಗಿದ್ದಾನೆ" ಬರ್ನಾಡ್ 1.ರಾಮ್ ರವರ 'ಹಿಸ್ ವೇ ಔಟ್' ಪುಸ್ತಕದ ಪುಟ 50.

ದೇವರು ತನ್ನ ಜನರನ್ನು ದಾಸತ್ವದಿಂದ ಬಿಡಿಸಿ ಹಿಂದಕ್ಕೆ ಕೊಂಡುಕೊಂಡನು ಅಥವಾ ಈಡು ಕೊಟ್ಟನು ಎಂಬುದನ್ನು ಹೇಗೆ ಅರ್ಥಮಾಡಿಕೊಂಡಿದ್ದೀರಿ? ಅದಕ್ಕಾಗಿ ಆತನು ಯಾವ ಬೆಲೆಯನ್ನು ತೆತ್ತನು? ಅದು ನಾವೆಷ್ಟು ಅಮೂಲ್ಯರು ಎಂಬುದನ್ನು ಹೇಳುತ್ತದೆ? (ಮಾರ್ಕ 10:45, 1 ತಿಮೊಥೆ 2:6, ಮತ್ತು ಪ್ರಕಟನೆ 5:9)ನ್ನು ನೋಡಿರಿ.

ವಿಮೋಚನಕಾಂಡ 3:8ನೇ ವಚನದಲ್ಲಿ ದೇವರು ತಾನು ಇಸ್ರಾಯೇಲನ್ನು ಕಾಪಾಡಲು ಇಳಿದುಬಂದಿದ್ದೇನೆ ಎಂಬುದಾಗಿ ಹೇಳುತ್ತಾನೆ. ಇದು ದೇವರು ಮನುಷ್ಯನೊಂದಿಗೆ ಸಂವಾದ ನಡೆಸುವಾಗ ಉಪಯೋಗಿಸುವ ಸಾಮಾನ್ಯ ಕ್ರಿಯಾಪದವಾಗಿದೆ. ದೇವರು ಪರಲೋಕದಲ್ಲಿದ್ದಾನೆ, ನಾವು ಭೂಮಿಯ

ಮೇಲಿದ್ದೇವೆ, ನಮ್ಮನ್ನು ಕಾಪಾಡುವುದಕ್ಕೆ ಆತನು ಕೆಳಗಿಳಿದು ಬರಲೇಬೇಕು. ಅದೇ ಆಲೋಚನೆಯು ಯೇಸುಕ್ರಿಸ್ತನು ನಮ್ಮ ಮಧ್ಯೆ ಇಳಿದುಬಂದು ನಮಗಾಗಿ ಶ್ರಮೆ ಹೊಂದಿ ಸತ್ತನು ಎಂಬುದು ನಿಜವಾದ ಅರ್ಥವನ್ನು ಕೊಡುತ್ತದೆ.

ನಮ್ಮನ್ನು ವಿಮೋಚಿಸಲು ಪುನರುತ್ಥಾನ ಹೊಂದಿದನು ಎಂಬ ನಿಜವಾದ ಅರ್ಥವನ್ನು ನೀಡುತ್ತದೆ. ವಾಕ್ಯವೆಂಬವನು ನರಾವತಾರವೆತ್ತಿ ನಮ್ಮ ಮಧ್ಯೆ ವಾಸಿಸಿದನು (ಯೋಹಾನ 1:14) ಎಂಬ ವಚನವು ದೇವರು ನಮ್ಮನ್ನು ರಕ್ಷಿಸುವುದಕ್ಕಾಗಿ ಕೆಳಗಿಳಿದು ಬಂದನು ಎಂಬುದಾಗಿ ಇನ್ನೊಂದು ರೀತಿಯಲ್ಲಿ ಹೇಳುತ್ತದೆ.

**ಮಂಗಳವಾರ** **ಮೇ 11**

## ಸಿನಾಯಿ ಬೆಟ್ಟದ ಒಡಂಬಡಿಕೆ

ವಿಮೋಚನಕಾಂಡ ಪುಸ್ತಕವು ಓದುಗರ ಆಸಕ್ತಿಯನ್ನು ಮುಖ್ಯವಾದ ಮೂರು ಘಟನೆಗಳ ಕಡೆಗೆ ಸೆಳೆಯುತ್ತದೆ. ಇಸ್ರಾಯೇಲ್ಯರು ಪಡೆದುಕೊಂಡ ವಿಮೋಚನೆ ಒಡಂಬಡಿಕೆಯ ಸ್ಥಾಪನೆ ಮತ್ತು ದೇವದರ್ಶನಗುಡಾರದ ನಿರ್ಮಾಣ ಇವು ವಿಮೋಚನಾಕಾಂಡದಲ್ಲಿ ಮುಖ್ಯವಾದ ಮೂರು ಘಟನೆಗಳು. ಈ ಮೂರು ಘಟನೆಗಳಲ್ಲಿ ಶಿಖರಪ್ರಾಯವಾದದು ವಿಮೋಚನಕಾಂಡ 19 ರಿಂದ 24ನೇ ಅಧ್ಯಾಯದಲ್ಲಿ ದಾಖಲಾಗಿರುವ ಒಡಂಬಡಿಕೆಯ ಸ್ಥಾಪನೆ. ಈ ಅಧ್ಯಾಯಗಳು ನಡೆದ ಘಟನಾವಳಿಗಳನ್ನು ಮತ್ತು ಅವುಗಳ ಅನುಕ್ರಮದ ನಡುವೆ ಇರುವ ಸಂಬಂಧವನ್ನು ಸ್ಥೂಲ ಚಿತ್ರವನ್ನು ನೋಡೋಣ.

ಕೆಳಗೆ ಪಟ್ಟಿ ಮಾಡಿರುವ ಎಲ್ಲಾ ಘಟನೆಗಳ ಮೇಲೆ ಮತ್ತು ಅನುಕ್ರಮಣಿಯ ಮೇಲೆ ನಮ್ಮ ಗಮನವನ್ನು ಹರಿಸೋಣ.

1. ದೇವರಿಂದ ಇಸ್ರಾಯೇಲ್ಯರು ವಿಮೋಚನೆಗೊಂಡು ಸಿನಾಯಿಬೆಟ್ಟದ ಪ್ರದೇಶಕ್ಕೆ ಬಂದು ಪಾಳೆಯ ಮಾಡಿಕೊಂಡದ್ದು (ವಿ.ಕಾಂಡ 19:1,2).
2. ದೇವರು ಇಸ್ರಾಯೇಲ್ಯರ ಜೊತೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವ (ವಿ.ಕಾಂಡ 19:3–6)

3. ಒಡಂಬಡಿಕೆಯನ್ನು ಒಪ್ಪಿಕೊಳ್ಳುವುದಕ್ಕೆ ಇಸ್ರಾಯೇಲ್ಯರ ಪ್ರತಿಕ್ರಿಯೆ (ವಿ.ಕಾಂಡ 19:7,8).
4. ಒಡಂಬಡಿಕೆಯನ್ನು ಅಂಗೀಕರಿಸುವುದಕ್ಕೆ ಬೇಕಾದ ಔಪಚಾರಿಕ ಸಿದ್ಧತೆಗಳು (ವಿ.ಕಾಂಡ 19:9–25).
5. ಹತ್ತು ಆಜ್ಞೆಗಳ ಅಧಿಕೃತ ಘೋಷಣೆ (ವಿ.ಕಾಂಡ 20:1–17).
6. ಮೋಶೆಯು ಒಡಂಬಡಿಕೆಯ ಮಧ್ಯಸ್ಥನಾದದು (ವಿ.ಕಾಂಡ20:18–21)
7. ಒಡಂಬಡಿಕೆಯ ನಿಯಮಗಳು ಅರುಹಲ್ಪಟ್ಟದು (ವಿ.ಕಾಂಡ 20:22 ರಿಂದ 23:22 ರವರೆಗೆ).
8. ಒಡಂಬಡಿಕೆಯ ಸ್ಥಿರಪಡಿಸುವಿಕೆ (ವಿ.ಕಾಂಡ 24:1–18).

ಈ ಒಡಂಬಡಿಕೆಯು ರಕ್ಷಣೆಯ ಯೋಜನೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಸತ್ಯವೇದದಲ್ಲಿ ಆದಮ, ನೋಹ ಮತ್ತು ಅಬ್ರಹಾಮನ ನಂತರ ನಾಲ್ಕನೆ ಸಲ ಬರುವ ಒಡಂಬಡಿಕೆ ಇದಾಗಿದೆ.

ಇದರಲ್ಲಿ ದೇವದರ್ಶನ ಗುಡಾರದ ಸ್ಥಾಪನೆಯ ಮೂಲಕ ದೇವರು ತನ್ನನ್ನು ತಾನು ಸಂಪೂರ್ಣವಾಗಿ ವ್ಯಕ್ತಪಡಿಸಿಕೊಂಡಿದ್ದಾನೆ. ಹಾಗಾಗಿ ದೇವದರ್ಶನ ಗುಡಾರವು ಲೋಕದ ರಕ್ಷಣಾ ಯೋಜನೆಯನ್ನು ಜನರಿಗೆ ತೋರಿಸಿಕೊಡುವ ಮಾಧ್ಯಮವಾಗಿದೆ.

ದೇವರು ಇಸ್ರಾಯೇಲ್ಯರಿಗೆ ಐಗುಪ್ತದೇಶದ ದಾಸತ್ವದಿಂದ ಬಿಡುಗಡೆ ಮಾಡಿದಾಗ್ಯೂ ಆತನು ಅವರಿಗೆ ಮಾಡಿದ ವಿಮೋಚನೆಯು ಕೇವಲ ಸಾಮಾಜಿಕ ಸ್ವಾತಂತ್ರ್ಯಕ್ಕಿಂತ ಹೆಚ್ಚಿನ ಮಹತ್ವವುಳ್ಳದ್ದು ಎಂಬುದನ್ನು ಅವರು ಅರ್ಥಮಾಡಿ–ಕೊಳ್ಳಬೇಕೆಂದು ದೇವರ ಚಿತ್ತವಾಗಿತ್ತು. ಮನುಷ್ಯನ ಆತ್ಮವನ್ನು ನಾಶಪಡಿಸುವ ಪಾಪದ ದಾಸತ್ವದಿಂದ ಅವನನ್ನು ವಿಮೋಚಿಸುವುದು ದೇವರ ಉದ್ದೇಶವಾಗಿತ್ತು. ಇದನ್ನು ದೇವದರ್ಶನ ಗುಡಾರದ ಸೇವೆಗಳು ಸಂಕೇತಿಸುವ ಯೇಸುಕ್ರಿಸ್ತನ ಯಜ್ಞದ ಮೂಲಕ ಸಾಧ್ಯಪಡಿಸಿದನು. ಇಸ್ರಾಯೇಲ್ಯರನ್ನು ದಾಸತ್ವದಿಂದ ಬಿಡುಗಡೆಗೊಳಿಸಿ ನ್ಯಾಯಪತ್ರಕೊಟ್ಟ ಕೂಡಲೇ ಒಡಂಬಡಿಕೆಯ ನಿಜವಾದ

ಉದ್ದೇಶವನ್ನು ಕೈಗೂಡಿಸಲು ರಕ್ಷಣೆಯ ಯೋಜನೆಯನ್ನು ಪ್ರತಿಬಿಂಬಿಸುವ ದೇವದರ್ಶನಗುಡಾರದ ಸೇವೆಗಳನ್ನು ಸ್ಥಾಪಿಸಲು ದೇವರು ಅವರಿಗೆ ಸೂಚನೆ ನೀಡಿದುದಕ್ಕೆ ಆಶ್ಚರ್ಯಪಡಬೇಕಾಗಿಲ್ಲ. ಯಾಕೆಂದರೆ ಪಾಪದಲ್ಲಿ ಬಿದ್ದುಹೋಗಿರುವ ಮನುಷ್ಯರಿಗೆ ರಕ್ಷಣೆ ಉಂಟುಮಾಡದ ಒಡಂಬಡಿಕೆಯು ಒಡಂಬಡಿಕೆಯೇ ಅಲ್ಲ. ಏದೇನ್ ತೋಟದಲ್ಲಿ ಮತ್ತು ಸಿನಾಯಿ ಬೆಟ್ಟದಲ್ಲಿ ಮಾಡಿದ ಒಡಂಬಡಿಕೆಗಳ ಉದ್ದೇಶ ಮನುಷ್ಯನ ರಕ್ಷಣೆಯೇ ಆಗಿತ್ತು.

ದೇವರ ಮತ್ತು ಇಸ್ರಾಯೇಲ್ಯ ಜನರ ನಡುವೆ ಒಡಂಬಡಿಕೆ ಯಾಕೆ ಅವಶ್ಯಕವಾಗಿತ್ತು? (ಧ.ಕಾಂಡ 29:10–13ನ್ನು ನೋಡಿರಿ. ಒಡಂಬಡಿಕೆಯಲ್ಲಿ ಅಡಕವಾಗಿರುವ ಸಂಬಂಧಿಕವಾದ ಅಂಶವನ್ನು ಪುನಃ ಗಮನಿಸಿರಿ).

**ಬುಧವಾರ** **ಮೇ 12**

## ದೇವರು ಮತ್ತು ಇಸ್ರಾಯೇಲ್

ಹೀಗಿರಲಾಗಿ ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಬಂಧನೆಯನ್ನು ಅನುಸರಿಸಿ ನಡೆದರೆ ನೀವು ಎಲ್ಲಾ ಜನಾಂಗಗಳಲ್ಲಿ ನನಗೆ ಸ್ವಕೀಯ ಜನರಾಗುವಿರಿ; ಸಮಸ್ತಭೂಮಿಯು ನನ್ನದಷ್ಟೆ. ನೀವು ನನಗೆ ಯಾಜಕ ರಾಜ್ಯವೂ ಪರಿಶುದ್ಧ ಜನರೂ ಆಗಿರುವಿರಿ. ಇವೇ ನೀನು ಇಸ್ರಾಯೇಲ್ಯರಿಗೆ ಹೇಳಬೇಕಾದ ಮಾತುಗಳು ಎಂದನು (ವಿ.ಕಾಂಡ 19:5,6).

ಈ ವಚನಗಳ ಮೂಲಕ ದೇವರು ತನ್ನ ಇಸ್ರಾಯೇಲ್ಯರೊಂದಿಗೆ ಮಾಡಿಕೊಳ್ಳುವ ಒಡಂಬಡಿಕೆಯು ಪ್ರಸ್ತಾವನೆ ಇಡುತ್ತಿದ್ದಾನೆ. ದೇವರು ಸ್ವತಃ ತಾನೇ ಇಸ್ರಾಯೇಲ್ಯರನ್ನು ಕರೆಯುತ್ತಿದ್ದಾಗ್ಯೂ ಅವರು ಅದನ್ನು ಆಯ್ಕೆ ಮಾಡಿಕೊಳ್ಳದೆ ಹೋಗಿದ್ದರೆ ಕರೆಯುವಿಕೆಯ ಅನುಗ್ರಹವು ಅದರಷ್ಟಕ್ಕೆ ಅದೇ ಆಗುತ್ತಿರಲಿಲ್ಲ. ಅದಕ್ಕೆ ಅವರ ಸಹಕಾರವು ಅತ್ಯಗತ್ಯವಾಗಿತ್ತು. ಐಗುಪ್ತದೇಶದಿಂದ ಆದ ಬಿಡುಗಡೆಯೂ ಸಹಾ ಅವರ ಸಹಕಾರವನ್ನು ಒಳಗೊಂಡಿತ್ತು. ಒಂದುವೇಳೆ ಅವರು ದೇವರು ಹೇಳಿದ್ದನ್ನು ಮಾಡದೇ ಹೋಗಿದ್ದರೆ ಅವರು ಬಿಡುಗಡೆ ಹೊಂದುತ್ತಿರಲಿಲ್ಲ (ಅವರು ಮನೆಯ ಬಾಗಿಲಿನ ನಿಲುವುಪಟ್ಟಗಳಿಗೆ ರಕ್ತವನ್ನು ಹಚ್ಚಬೇಕಾಗಿತ್ತು). ಇದು ಅಷ್ಟು ಸರಳವಾದ ವಿಷಯ.

ದೇವರು ಇಸ್ರಾಯೇಲ್ಯರಿಗೆ ನೀವು ಇಷ್ಟಪಟ್ಟರೂ ಪಡದಿದ್ದರೂ ನನಗೆ ಸ್ವಕೀಯ ಜನರು, ಯಾಜಕರಾಜ್ಯವೂ ಆಗಿರುವಿರಿ ಎಂದು ಹೇಳಲಿಲ್ಲ. ಅದು ಹಾಗೆ ಕಾರ್ಯನಿರ್ವಹಿಸುವುದಿಲ್ಲ ಮತ್ತು ವಚನವು ಹಾಗೆ ಹೇಳುವುದಿಲ್ಲ. ವಿಮೋಚನಕಾಂಡ 19:5,6 ವಚನಗಳನ್ನು ಓದಿರಿ. ನಂಬಿಕೆಯಿಂದಲೇ ರಕ್ಷಣೆ ಎಂಬುದನ್ನು ಪರಿಗಣಿಸಿಕೊಂಡು ದೇವರು ಈ ವಚನಗಳಲ್ಲಿ ಹೇಳಿರುವುದನ್ನು ಹೇಗೆ ಅರ್ಥಮಾಡಿಕೊಳ್ಳುವಿರಿ? ದೇವರು ನಾವು ವಿಧೇಯರಾಗಿ ನಡೆದುಕೊಳ್ಳಬೇಕೆಂದು ಕೊಟ್ಟ ಆಜ್ಞೆಯು ರಕ್ಷಣೆಯು ಕೃಪೆಯಿಂದಲೇ ಎನ್ನುವ ಪರಿಕಲ್ಪನೆಯನ್ನು ನಿರರ್ಥಕಪಡಿಸುತ್ತದೆಯೇ? ಇದಕ್ಕೆ ಉತ್ತರವನ್ನು ಕಂಡುಕೊಳ್ಳಲು ಈ ಕೆಳಗಿನ ವಚನಗಳು ಹೇಗೆ ಸಹಾಯ ಮಾಡುತ್ತವೆ? ರೋಮನ್ಸ್ 3:19–24; ರೋಮನ್ಸ್ 6:1,2 ರೋಮನ್ಸ್ 7:7, ಪ್ರಕ 14:12.

"ರಕ್ಷಣೆಯು ದೇವರು ಮನುಷ್ಯರಿಗೆ ಕೊಡುವ ಉಚಿತವಾದ ವರವಾಗಿದ್ದು ಇದನ್ನು ನಂಬಿಕೆಯಿಂದಲೇ ಪಡೆದುಕೊಳ್ಳಬೇಕು. ನಮ್ಮ ವಿಧೇಯತ್ವದಿಂದ ಸಂಪಾದಿಸಿಕೊಳ್ಳಲು ಆಗುವುದಿಲ್ಲ" – ಎಲೆನ್ ಜಿ ವೈಟಮ್ಮನವರ "ಕ್ರಿಸ್ತನೆಡೆಗೆ ಹೆಜ್ಜೆಗಳು" ಎಂಬ ಪುಸ್ತಕದಲ್ಲಿ 61ನೇ ಪುಟ.

ದೇವರು ಇಸ್ರಾಯೆಲ್ಯ ಜನರಿಗೆ ಏನು ಮಾಡಲು ಮನಸ್ಸುಳ್ಳವನಾಗಿದ್ದಾನೆ ಎಂಬುದನ್ನು ಆಲೋಚಿಸಿರಿ; ಆತನು ಅವರನ್ನು ಐಗುಪ್ತದೇಶದ ದಾಸತ್ವದಿಂದ ಅದ್ಭುತವಾಗಿ ಬಿಡಿಸಿದುದು ಮಾತ್ರವಲ್ಲ ಅವರನ್ನು ತನ್ನ ಸ್ವಂತ ಪ್ರಜೆಗಳನ್ನಾಗಿ ಮತ್ತು ಯಾಜಕಜನಾಂಗವನ್ನಾಗಿ ಮಾಡಿಕೊಳ್ಳಲು ಬಯಸಿದ್ದನು. ತಾನು ಕೊಡುವ ರಕ್ಷಣೆಯ ಪ್ರಯುಕ್ತ ಅವರು ಬೆಳೆಸುವ ಸಂಬಂಧದ ಮೇಲೆ (ತಾತ್ಕಾಲಿಕ ಮತ್ತು ಶಾಶ್ವತ ರಕ್ಷಣೆ) ದೇವರು ಅವರನ್ನು ಆತ್ಮೀಕವಾಗಿ, ಬೌದ್ಧಿಕವಾಗಿ ಮತ್ತು ನೈತಿಕಮಟ್ಟದಲ್ಲಿ ಪುರಾತನ ಲೋಕಕ್ಕೆ ಒಂದು ಅದ್ಭುತವನ್ನಾಗಿ ಮಾಡಿ ಎಲ್ಲಾ ಜನಾಂಗಗಳಿಗೂ ತನ್ನ ಸುವಾರ್ತೆಯನ್ನು ಸಾರುವ ಉದ್ದೇಶಕ್ಕಾಗಿ ಉಪಯೋಗಿಸ–ಬೇಕೆಂದಿದ್ದನು. ಇದಕ್ಕೆ ಪ್ರತಿಕ್ರಿಯೆಯಾಗಿ ಅವರು ವಿಧೇಯರಾಗಬೇಕಿತ್ತಷ್ಟೆ.

ಇಂದಿನ ಪಾಠದಲ್ಲಿ ಬಿಂಬಿತವಾಗಿರುವ ನಿಯಮವನ್ನು ನಮ್ಮ ಮತ್ತು ದೇವರ ಪರಸ್ಪರವಾದ ವೈಯಕ್ತಿಕ ಸಂಬಂಧದಲ್ಲಿ ಯಾವ ರೀತಿಯಲ್ಲಿ ಕಾಣುತ್ತೇವೆ (ಕಾಣಬೇಕು?)

**ಗುರುವಾರ** **ಮೇ 13**

## ವಾಗ್ದಾನಗಳು, ವಾಗ್ದಾನಗಳು .... (ವಿ.ಕಾಂಡ 19:8)

ಮೊದಲ ನೋಟಕ್ಕೆ ಎಲ್ಲವೂ ಸರಿಯಾಗಿ ಕಾಣುತ್ತದೆ. ತನ್ನ ಜನರನ್ನು ದೇವರು ವಿಮೋಚಿಸಿ ತನ್ನ ಒಡಂಬಡಿಕೆಯ ವಾಗ್ದಾನಗಳನ್ನು ಕೊಡುತ್ತಾನೆ. ಅದಕ್ಕೆ ಅವರು ಒಪ್ಪುತ್ತಾರೆ; ದೇವರು ಅವರಿಂದ ಏನು ಕೇಳುತ್ತಾನೋ ಅವನ್ನೆಲ್ಲಾ ಅವರು ಮಾಡುತ್ತಾರೆ. ಇದು "ಪರಲೋಕದಲ್ಲಿ ಮಾಡಿದ ವ್ಯವಸ್ಥೆ" ಅಲ್ಲವೇ?

ಈ ಕೆಳಗೆ ಕೊಟ್ಟಿರುವ ವಚನಗಳನ್ನು ಓದಿರಿ. ಇಸ್ರಾಯೇಲ್ಯರು ಒಡಂಬಡಿಕೆಗೆ ಹೇಗೆ ಸ್ಪಂದಿಸಿದರು ಎಂಬುದರ ಬಗ್ಗೆ ಯಾವ ಅಂತದೃಷ್ಟಿಯನ್ನು (ಒಳನೋಟವನ್ನು) ಈ ವಚನಗಳು ನಮಗೆ ಕೊಡುತ್ತವೆ?

ರೋಮನ್ಸ್ 9:31,32 ____________________

ರೋಮನ್ಸ್ 10:3 ____________________

ಇಬ್ರಿಯ 4:1,2 ____________________

ದೇವರು ನಮ್ಮನ್ನು ಮಾಡಬೇಕೆಂದು ಏನನ್ನಾದರೂ ಕೇಳಿಕೊಳ್ಳಲಿ ಅವನೊಂದಿಗಿನ ನಮ್ಮ ಸಂಬಂಧವು ನಂಬಿಕೆಯ ಮೇಲೆ ಆಧಾರಗೊಂಡಿದೆ. ನಂಬಿಕೆಯು ಅದಕ್ಕೆ ಅನುಸಾರವಾದ ಕ್ರಿಯೆಯನ್ನು ಮಾಡಲು ಅಗತ್ಯವಾದ ಅಸ್ತಿವಾರವನ್ನು ಒದಗಿಸಿಕೊಡುತ್ತದೆ.

ಕೆಲಸಗಳು (ಕ್ರಿಯೆಗಳು) ಎಷ್ಟೇ ಸದುದ್ದೇಶ ಹೊಂದಿರಲಿ, ಎಷ್ಟೇ ಪ್ರಾಮಾಣಿಕವಾಗಿರಲಿ, ಅವು ಎಷ್ಟೇ ಸಂಖ್ಯೆಯಲ್ಲಿರಲಿ ಅವುಗಳಲ್ಲಿ ಮತ್ತು ಅವುಗಳಿಂದ ನಾವು ಪರಿಶುದ್ಧನಾದ ದೇವರ ದೃಷ್ಟಿಯಲ್ಲಿ ಸ್ವೀಕಾರಾರ್ಹರಾಗುವಂತೆ ಮಾಡುವುದಕ್ಕೆ ಸಾಧ್ಯವಿಲ್ಲ. ಅವು ಇಸ್ರಾಯೇಲ್ಯರ ಕಾಲದಲ್ಲಿಯೂ ಸಹಾ ಹಾಗೆ ಮಾಡಲಿಲ್ಲ. ಏನೇ ಆಗಲಿ ಸತ್ಯವೇದವು ಕ್ರಿಯೆಗಳಿಗೆ ಮತ್ತೆ ಮತ್ತೆ ಒತ್ತುಕೊಟ್ಟರೂ ದೇವರ ದೃಷ್ಟಿಯಲ್ಲಿ ಅವುಗಳು ನಮ್ಮನ್ನು ಅರ್ಹರನ್ನಾಗಿ ಮಾಡಲಾರವು ಏಕೆ? (ಯೆಶಾಯ 53:6, ಯೆಶಾಯ 64:6, ರೋಮ 3:23).

ದೌರ್ಭಾಗ್ಯವೇನೆಂದರೆ ಇಸ್ರಾಯೇಲ್ಯರು ವಿಧೇಯತೆಯನ್ನು ರಕ್ಷಣೆಗೆ ಆಧಾರ ಮಾಡಿಕೊಂಡರು. ಆದರೆ ವಿಧೇಯತೆಯು ರಕ್ಷಣೆ ಹೊಂದಿದ್ದಕ್ಕೆ ಪ್ರತಿಯಾಗಿ

ದೇವರಿಗೆ ವಿಧೇಯತೆ ತೋರಿಸಬೇಕು. ಅವರು ದೇವರ ಮೇಲೆ ನಂಬಿಕೆ ಇಡುವುದರಿಂದ ಸಿಗುವ ನೀತಿಗೆ ಹಂಬಲಿಸದೆ ಧರ್ಮಶಾಸ್ತ್ರಕ್ಕೆ ವಿಧೇಯ–ರಾಗುವುದರಿಂದ ನೀತಿ ಸಿಗುತ್ತದೆ ಎಂದು ಹಂಬಲಿಸಿದರು. ಸಿನಾಯಿ ಬೆಟ್ಟದಲ್ಲಿ ಏರ್ಪಟ್ಟ ಒಡಂಬಡಿಕೆಯು ಹೆಚ್ಚಿನ ಸವಿವರವಾದ ವಿಧಿನಿಯಮಗಳನ್ನು ಹೊಂದಿದ್ದಾಗ್ಯೂ ಹಿಂದಿನ ಎಲ್ಲಾ ಒಡಂಬಡಿಕೆಗಳಂತೆಯೇ ಇದು ಕೂಡ ಕೃಪೆಯ ಮೇಲೆ ಆಧಾರಗೊಂಡ ಒಡಂಬಡಿಕೆಯಾಗಿತ್ತು. ಉಚಿತವಾಗಿ ಅನುಗ್ರಹಿಸಿರುವ ಈ ಕೃಪೆಯು ನಮ್ಮ ಹೃದಯದಲ್ಲಿ ತಕ್ಕ ಬದಲಾವಣೆಯನ್ನು ಉಂಟುಮಾಡಿ ನಮ್ಮನ್ನು ವಿಧೇಯತೆಗೆ ನಡೆಸುತ್ತದೆ. ಇಸ್ರಾಯೇಲ್ಯರ ಸಮಸ್ಯೆ ಏನಾಗಿತ್ತೆಂದರೆ ಅವರು ವಿಧೇಯರಾಗುವುದಕ್ಕೆ ಮಾಡುತ್ತಿದ್ದ ಪ್ರಯತ್ನವಲ್ಲ (ಒಡಂಬಡಿಕೆಯು ವಿಧೇಯತೆಯನ್ನು ಒತ್ತಾಯಪಡಿಸುತ್ತದೆ. ಆದುದರಿಂದ ಅದಕ್ಕೆ ವಿಧೇಯರಾಗುವುದು ತಪ್ಪಲ್ಲ). ಆದರೆ ವಿಧೇಯರಾಗುವ ರೀತಿಯು ಅವರ ಸಮಸ್ಯೆಯಾಗಿತ್ತು, ಹೇಳಬೇಕೆಂದರೆ ಅವರ ವಿಧೇಯತೆಯು ನಿಜವಾದ ವಿಧೇಯತೆಯೇ ಆಗಿರಲಿಲ್ಲ. ಇದನ್ನು ಆ ಜನಾಂಗದ ತದನಂತರದ ಚರಿತ್ರೆಯು ನಿರೂಪಿಸುತ್ತದೆ.

ರೋಮನ್ಸ್ 10:3ನೇ ವಚನವನ್ನು ನಿಗಾವಹಿಸಿ ಓದಿರಿ. ಯಾವ ಅಂಶವನ್ನು ಪೌಲನು ಎತ್ತಿಹಿಡಿಯುತ್ತಾನೆ? ತಮ್ಮ ಸ್ವಂತ ನೀತಿಯನ್ನು ಸ್ಥಾಪಿಸುವುದಕ್ಕೆ ಪ್ರಯತ್ನಪಟ್ಟರೆ ಏನಾಗುತ್ತದೆ? ಅಂತಹ ಪ್ರಯತ್ನವು ನಮ್ಮನ್ನು ಅನಿವಾರ್ಯವಾಗಿ ಪಾಪ, ಅನೀತಿ ಮತ್ತು ಬಂಡಾಯಕ್ಕೆ ನಡೆಸುತ್ತದೆ ಏಕೆ? ನಮ್ಮ ಸ್ವಂತ ಜೀವಿತಗಳನ್ನು ನಾವು ನೋಡಿಕೊಳ್ಳೋಣ. ನಾವು ಸಹ ಅಂತಹ ತಪ್ಪನ್ನು ಮಾಡುವವರಾಗಿಲ್ಲವೇ?

**ಶುಕ್ರವಾರ** **ಮೇ 15**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟಮ್ಮನವರ "ನಮ್ಮ ಪಿತೃಗಳು ಮತ್ತು ಪ್ರವಾದಿಗಳು" ಎಂಬ ಪುಸ್ತಕದಲ್ಲಿ ವಿಮೋಚನೆ ಅಧ್ಯಾಯದ ಪುಟ 281–290; ಕೆಂಪು ಸಮುದ್ರದಿಂದ ಸಿನಾಯಿ ಬೆಟ್ಟಕ್ಕೆ ಅಧ್ಯಾಯದಲ್ಲಿ ಪುಟ 314;

ನಾವು ಧರ್ಮವನ್ನು ಸಾಂಪ್ರದಾಯಕವಾಗಿ ಪಾಲನೆ ಮಾಡುವುದಕ್ಕೆ ನಮ್ಮ ಸ್ವಂತ ಸಾಮರ್ಥ್ಯದಿಂದ ಅದರ ನಿಬಂಧನೆಗಳನ್ನು ಪೂರೈಸುವುದಕ್ಕೆ ಪ್ರಯತ್ನ ಪಡುವಾಗ ನಮ್ಮ ಮನಸ್ಸಿನಲ್ಲಿ ದಾಸತ್ವದ ಮನೋಭಾವ ಹುಟ್ಟಿಕೊಳ್ಳುತ್ತದೆ. ನಾವು ಕೃಪೆಯ ಒಡಂಬಡಿಕೆಯಾದ ಅಬ್ರಹಾಮನ ಒಡಂಬಡಿಕೆಯ ಅಡಿಯಲ್ಲಿ ಬರಬೇಕು (ಇದು ಯೇಸುಕ್ರಿಸ್ತನಲ್ಲಿ ನಂಬಿಕೆಯಿಡುವ ಒಡಂಬಡಿಕೆಯಾಗಿದೆ). ಅಬ್ರಹಾಮನಿಗೆ ಸಾರಿದ ಯಾವ ಸುವಾರ್ತೆಯು ನಿರೀಕ್ಷೆಯನ್ನು ಹುಟ್ಟಿಸಿತೋ ಅದೇ ಸುವಾರ್ತೆಯು ಇಂದು ನಮಗೂ ಸಹಾ ಸಾರಲ್ಪಡುತ್ತಿದೆ. ಅಬ್ರಹಾಮನು ನಂಬಿಕೆಯನ್ನು ಹುಟ್ಟಿಸುವವನೂ ಅದನ್ನು ಪೂರೈಸುವವನೂ ಆದ ಯೇಸುಕ್ರಿಸ್ತನಲ್ಲಿ ತನ್ನ ನಂಬಿಕೆಯನ್ನು ಇಟ್ಟನು" – ಎಲೆನ್ ಜಿ ವೈಟಮ್ಮನವರ ಎಸ್.ಡಿ.ಎ. ಬೈಬಲ್ ವ್ಯಾಖ್ಯಾನದ 6ನೇ ಸಂಪುಟ, 1077ನೇ ಪುಟ.

ಇಸ್ರಾಯೇಲ್ಯರು ಐಗುಪ್ತದೇಶದ ದಾಸತ್ವದಲ್ಲಿದ್ದಾಗ ದೇವರ ನ್ಯಾಯಪ್ರಮಾಣದ ಜ್ಞಾನವನ್ನು ಕಳೆದುಕೊಂಡರು ಮತ್ತು ಅನ್ಯಧರ್ಮದ ಆಚರಣೆಗಳನ್ನು ಸಂಪ್ರದಾಯಗಳನ್ನು ತಮ್ಮದರೊಂದಿಗೆ ಬೆರೆಸಿಕೊಂಡರು. ದೇವರು ಅವರನ್ನು ಸಿನಾಯಿ ಬೆಟ್ಟಕ್ಕೆ ನಡೆಸಿಕೊಂಡು ಬಂದು ಅವರಿಗೆ ತನ್ನ ಸ್ವಂತ ಸ್ವರದಲ್ಲಿ ನ್ಯಾಯಪ್ರಮಾಣವನ್ನು ಘೋಷಿಸಿದನು" – ಎಲೆನ್ ಜಿ ವೈಟಮ್ಮನವರ ನಮ್ಮ ಪಿತೃಗಳು ಮತ್ತು ಪ್ರವಾದಿಗಳು ಪುಸ್ತಕದಲ್ಲಿ 334ನೇ ಪುಟ.

## ಆರೋಗ್ಯದ ಲೇಖನಮಾಲೆ
## ಆರನೇ ವಾರ

### * ಪಾರ್ಶ್ವವಾಯು ಅಥವಾ ಲಕ್ವ

**ಲಕ್ವ ಹೊಡೆಯುವುದು ಅಂದರೇನು?**

ರಕ್ತವು ಸಾಕಷ್ಟು ಪ್ರಮಾಣದಲ್ಲಿ ಮೆದುಳಿನ ಅಂಗಾಂಗಗಳಿಗೆ ಪ್ರಾಣವಾಯು (ಆಮ್ಲಜನಕ) ಒದಗಿಸದಿದ್ದಾಗ ದೇಹದ ಒಂದು ಭಾಗವು ನಿಷ್ಕ್ರಿಯವಾಗಿ ನಿಯಂತ್ರಣ ಕಳೆದುಕೊಳ್ಳುವುದು. ಎಡಭಾಗದ ಮೆದುಳಿನ ಅಂಗಾಂಶಗಳಿಗೆ ರಕ್ತಸಂಚಾರ ಕುಂಠಿತವಾದಾಗ ಶರೀರದ ಬಲಭಾಗವು ಮತ್ತು ಬಲಭಾಗದ ಮೆದುಳಿನ ಅಂಗಾಂಶಕ್ಕೆ ರಕ್ತಸರಬರಾಜು ಕಡಿಮೆಯಾದರೆ ಶರೀರದ ಎಡಭಾಗವು ನಿಯಂತ್ರಣ ಕಳೆದುಕೊಳ್ಳುವುದು.

**ಗುರುತಿಸುವುದು ಹೇಗೆ?**

ಲಕ್ವ ಹೊಡೆಯುವುದಕ್ಕೆ ಮೊದಲು ರೋಗಿಯಲ್ಲಿ ವಾಕರಿಗೆ ಮತ್ತು ತೀವ್ರ ತಲೆ ನೋವುಂಟಾಗುತ್ತದೆ. ಅಲ್ಲದೆ ತಲೆಸುತ್ತು ಕಂಡುಬರುತ್ತದೆ.

**ಕಾರಣವೇನು?**

ಮೆದುಳಿಗೆ ಪ್ರಾಣವಾಯುವಿನ (ಆಮ್ಲಜನಕದ) ಕೊರತೆಯು ಲಕ್ವಕ್ಕೆ ಮುಖ್ಯ ಕಾರಣ. ರಕ್ತನಾಳದಲ್ಲಿ ರಕ್ತವು ಹೆಪ್ಪುಗಟ್ಟಿ ಮೆದುಳಿಗೆ ರಕ್ತಸರಬರಾಜು ನಿಂತಾಗ ಅಥವಾ ತಲೆಗೆ ರಕ್ತವನ್ನು ಒಯ್ಯುವ ಮುಖ್ಯರಕ್ತ ನಾಳಗಳು ಕಿರಿದಾಗಿ ಮೆದುಳಿನ ಬುಡಭಾಗಕ್ಕೆ ಸಾಕಷ್ಟು ಪ್ರಮಾಣದಲ್ಲಿ ರಕ್ತ ಸರಬರಾಜು ಆಗದಿರುವಾಗ ಲಕ್ವ ಹೊಡೆಯುತ್ತದೆ.

**ಏನು ಮಾಡಬೇಕು?**

1. ತಕ್ಷಣವೇ 300 ಮಿ.ಗ್ರಾಂ. ಸ್ಪಿರಿನ್ ಗುಳಿಗೆ ತೆಗೆದುಕೊಳ್ಳಬೇಕು.
2. ವೈದ್ಯರ ಬಳಿಗೆ ಬೇಗ ಹೋಗಬೇಕು. ಹತ್ತಿರದಲ್ಲಿ ವೈದ್ಯರಿಲ್ಲದಿದ್ದಲ್ಲಿ, ರೋಗಿಯನ್ನು ಉಗುರು ಬೆಚ್ಚಗಿನ ನೀರಿನಲ್ಲಿ ಮಲಗಿಸಬೇಕು.

## * ಕ್ಷಯ ರೋಗ

**ಕ್ಷಯ ರೋಗವೆಂದರೇನು?**

ಶ್ವಾಸಕೋಶಗಳಲ್ಲಿ ಸಣ್ಣ ಸಣ್ಣ ರವೆಗಳಂತ ಗಂತಿಗಳಿರುವ ಅತಿಸೂಕ್ಷ್ಮವಾದ ಬ್ಯಾಕ್ಟೀರಿಯಮ್ ಎಂಬ ಏಕಾಣು ಜೀವಿಗಳಿಂದ ಉಂಟಾಗುವ ಸೋಂಕು ರೋಗ.

**ಗುರುತಿಸುವುದು ಹೇಗೆ?**

1. ವಾಸಿಯಾಗದ ಕೆಮ್ಮು ಮತ್ತು ಕೆಮ್ಮುವಾಗ ರಕ್ತಬರುವುದು.
2. ಮಧ್ಯಾಹ್ನ ಸಣ್ಣದಾಗಿ ಜ್ವರ ಮತ್ತು ರಾತ್ರಿಯಲ್ಲಿ ಬೆವರುವುದು.
3. ಎದೆ ಅಥವಾ ಬೆನ್ನಿನ ಮೇಲ್ಭಾಗದಲ್ಲಿ ನೋವು.
4. ತೂಕ ಕಡಿಮೆಯಾಗುವುದು ಮತ್ತು ನಿಶ್ಶಕ್ತಿ ಹೆಚ್ಚಾಗುವುದು.
5. ಚರ್ಮವು ಮೇಣದಂತೆ ನಯವಾಗಿ ವಿವರ್ಣವಾಗುವುದು
6. ಸ್ವರವು ಕರ್ಕಶವಾಗುವುದು.

**ಕಾರಣವೇನು?**

* ಕಾಯಿಸದ ಹಾಲನ್ನು ಕುಡಿಯುವುದರಿಂದ
* ಕ್ಷಯರೋಗಿಯ ಪಕ್ಕದಲ್ಲಿದ್ದಾಗ ಅವನು ಕೆಮ್ಮಿದಾಗ ಅಥವಾ ಸೀನಿದಾಗ ರೋಗಾಣುಗಳು ಇತರರಿಗೆ ಹರಡುತ್ತವೆ.

**ಏನು ಮಾಡಬೇಕು?**

ವೈದ್ಯರನ್ನು ಭೇಟಿ ಮಾಡಬೇಕು. 1–2 ವರ್ಷಗಳ ಕಾಲ ಕ್ರಮವಾಗಿ ಔಷಧ ತೆಗೆದುಕೊಂಡರೆ ಕ್ಷಯರೋಗವು ಸಂಪೂರ್ಣ ವಾಸಿಯಾಗುವುದು. ಔಷಧವು ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ದೊರೆಯುವುದು. ಸ್ವಲ್ಪ ಗುಣಕಂಡಾಗ, ರೋಗಿಗಳು ಔಷಧ ಸೇವನೆ ನಿಲ್ಲಿಸಬಾರದು. ಇದು ಅಪಾಯಕಾರಿ. ವೈದ್ಯರು ಹೇಳುವ ತನಕ ಔಷಧೋಪಚಾರ ನಡೆಯಬೇಕು.